KATK610012742024

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮಧುಗಿರಿ**

ಉಪಸ್ಥಿತರುಃ ಶ್ರೀ ಬಿ. ವೆಂಕಟಪ್ಪ., ಬಿ.ಎ.ಎಲ್.ಎಲ್.ಎಮ್.
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಮಧುಗಿರಿ.

**ತೀರ್ಪು ನೀಡಿದ ದಿನಾಂಕಃ 21ನೇ ಜುಲೈ 2026**

**ಸಿ.ಸಿ. ನಂ.69/2024**

**ಫಿರ್ಯಾದುದಾರರುಃ** ಸರ್ಕಾರ (ಮಿಡಿಗೇಶಿ ಪೋಲೀಸರಿಂದ)
ಸರಕಾರದ ಪರವಾಗಿ ಸರ್ಕಾರಿ ಅಭಿಯೋಜಕರು.

**ವಿರುದ್ಧ**

**ಆರೋಪಿಃ** **ಮಂಜುನಾಥ ಎ.**
ಬಿನ್ ಅಹೋಬಲಪ್ಪ,
ವಯಸ್ಸು 40 ವರ್ಷ,
ವಾಸಃ ಶಿರಾ ರಸ್ತೆ,
ಪಾವಗಡ ಟೌನ್.
(ಆರೋಪಿ ಪರ ಶ್ರೀ ಜಿ.ಎಸ್.ಆರ್., ವಕೀಲರು)

****

ಕೃತ್ಯ ನಡೆದ ದಿನಾಂಕ : 18.07.2024
ವರದಿಯಾದ ದಿನಾಂಕ : 18.07.2024

| | | |
|---|---|---|
| ಅಪರಾಧಿಕ ಕಲಂಗಳು | : | ಭಾ.ನ್ಯಾ.ಸಂ. ಕಲಂ 281, 106 ಮೋಟಾರ್ ವಾಹನ ಕಾಯ್ದೆ ಕಲಂ. 134(ಎ ಮತ್ತು ಬಿ), 187 |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 24.07.2025 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | : | 18.06.2026 |
| ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿಯನ್ನು ನಿರ್ದೋಷಿ ಎಂದು ತೀರ್ಮಾನಿಸಲಾಗಿದೆ. |

* * *

**<u>-: ತೀರ್ಪು :-</u>**

ಪ್ರಸ್ತುತ ಪ್ರಕರಣವನ್ನು ಆರಕ್ಷಕ ಉಪನೀರಿಕ್ಷಕರು ಮಿಡಿಗೇಶಿ ಪೋಲಿಸ್ ಠಾಣೆ ಮಧುಗಿರಿ ವಿಭಾಗ ರವರು ಆರೋಪಿತನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 281, 106 ಹಾಗೂ ಮೋಟಾರ್ ವಾಹನ ಕಾಯ್ದೆ ಕಲಂ.134 (ಎ ಮತ್ತು ಬಿ), 187ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ದೋಷಾರೋಪಣಾ ಪಟ್ಟಿಯನ್ನು ದಾಖಲು ಮಾಡಿರುತ್ತಾರೆ.

2. **<u>ಅಬಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ</u>.**

ದಿನಾಂಕಃ 18-07-2024 ರಂದು ಸಂಜೆ 06.15 ಗಂಟೆ ಸಮಯದಲ್ಲಿ ಮಿಡಿಗೇಶಿ ಪೋಲೀಸ ಠಾಣಾ ವ್ಯಾಪ್ತಿಯ ಹೊಸಕೆರೆ ಕೆರೆ ಏರಿ ಹಿಂಭಾಗದಲ್ಲಿರುವ ಚಿಕ್ಕಣ್ಣನವರ ಜಮೀನಿನ ಬಳಿ ಹಾದುಹೋಗಿರುವ ಮಧುಗಿರಿ-ಪಾವಗಡ ರಸ್ತೆಯಲ್ಲಿ ಆರೋಪಿಯು ಚಾಸಾ-13ರವರ ಹೆಸರಿನಲ್ಲಿರುವ KA-06-AB-5721 BOLERO PICK-UP ನೇ ವಾಹನವನ್ನು ಮಧುಗಿರಿ ಕಡೆಯಿಂದ ಪಾವಗಡ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಎದುರುಗಡೆಯಿಂದ ಬರುತ್ತಿದ್ದ

KA-64-K-1699 SPLENDER PLUS ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿದ ಪರಿಣಾಮ ದ್ವಿಚಕ್ರ ವಾಹನ ಓಡಿಸುತ್ತಿದ್ದ ನಿಜಲಿಂಗಪ್ಪರವರಿಗೆ ತಲೆಗೆ ಕಿವಿ ಮುಖಕ್ಕೆ ಮತ್ತು ಕೈ ಮತ್ತು ಕಾಲಿಗೆ ತೀವ್ರ ತರಹದ ಪೆಟ್ಟು ಬಿದ್ದು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆತಂದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವುದಾಗಿ ತಿಳಿಸಿದ್ದು, ಆರೋಪಿ ಅಪಘಾತ ಮಾಡಿ, ಅಪಘಾತದ ಬಗ್ಗೆ ಪೋಲಿಸರಿಗೆ ಮಾಹಿತಿ ತಿಳಿಸದೇ ಮತ್ತು ಗಾಯಾಳುವನ್ನು ಉಪಚರಿಸದೇ ಅಪಘಾತಪಡಿಸಿದ ವಾಹನದೊಂದಿಗೆ ಪರಾರಿಯಾಗಿರುತ್ತಾರೆಂದು ಚಾಸಾ-1 ರವರು ಮಿಡಿಗೇಶಿ ಪೊಲೀಸ್ ಠಾಣೆಯ ಪೊಲೀಸರಿಗೆ ಪಿರ್ಯಾದಿ ನೀಡಿದ್ದು, ಸದರಿ ಪಿರ್ಯಾದಿಯನ್ನು ಸ್ವೀಕರಿಸಿದ್ದ ಮಿಡಿಗೇಶಿ ಪೋಲೀಸ್ ಠಾಣೆಯ ಪೋಲೀಸರು ತಮ್ಮ ಠಾಣಾ ಮೊಕದ್ದಮೆ ನಂ.72/2024 ರ ಅಡಿ ಪ್ರಕರಣವನ್ನು ದಾಖಲಿಸಿಕೊಂಡು, ನಂತರ ಪಂಚರ ಸಮಕ್ಷಮ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಘಟನಾ ಸ್ಥಳದ ಪಂಚನಾಮೆ, ಶವ ಪಂಚನಾಮೆ ಮಾಡಿ, ಗಾಯಾಳುವಿನ ಗಾಯದ ಪ್ರಮಾಣ ಪತ್ರ ಪಡೆದು, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಸಮಗ್ರ ತನಿಖೆ ಮಾಡಿ ಆರೋಪಿತನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ.281, 106 ಹಾಗೂ ಮೋಟಾರ್ ವಾಹನ ಕಾಯ್ದೆ ಕಲಂ.134 (ಎ ಮತ್ತು ಬಿ), 187 ರಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ಅಪರಾಧಗಳ ಕುರಿತು ಸಂಜ್ಞೆ ತೆಗೆದುಕೊಂಡು ಆರೋಪಿಗೆ ಸಮನ್ಸ ಕಳಿಸಲಾಗಿ, ಆರೋಪಿ ಹಾಜರಾಗಿದ್ದು, ಆರೋಪಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 230ರ ಅಡಿಯಲ್ಲಿ ಅಭಿಯೋಜನೆಯ ದಾಖಲೆಗಳ ನಕಲು ಪ್ರತಿಯನ್ನು ಒದಗಿಸಲಾಗಿದೆ. ಆರೋಪಿಗೆ ಆರೋಪದ ಬಗ್ಗೆ ಆರೋಪಣೆಗಳನ್ನು ರಚಿಸಿ ಓದಿ ಹೇಳಲಾಗಿ ಆರೋಪಿ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಹೇಳಿದ್ದರಿಂದ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ.

4. ಅಭಿಯೋಜನೆಯು ತನ್ನ ಪರ ಒಟ್ಟು 11 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 11 ಎಂದು ವಿಚಾರಣೆ ಮಾಡಲಾಗಿದ್ದು, ನಿಪಿ-1 ರಿಂದ 29 ರಂತಹ ದಾಖಲೆಗಳನ್ನು ಗುರುತಿಸಲಾಗಿರುತ್ತದೆ. ಅಭಿಯೋಜನೆಯ ಸಾಕ್ಷಿದಾರರ ಸಾಕ್ಷ್ಯ ಮುಕ್ತಾಯವಾದ ನಂತರ ಆರೋಪಿಯ ಹೇಳಿಕೆಯನ್ನು ಭಾ.ನಾ.ಸು.ಸಂ.ಕಲಂಃ351ರಡಿ ದಾಖಲಿಸಿಕೊಂಡು ಆರೋಪಿಗೆ ತಮ್ಮ ಮಾದರಿಯ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಗಿದ್ದು, ಆರೋಪಿ ತನ್ನ ವಿರುದ್ದ ಹೇಳಿರುವ ಎಲ್ಲಾ ಸಾಕ್ಷ್ಯಗಳು ಸುಳ್ಳು ಎಂಬುದಾಗಿ ಅಲ್ಲಗಳೆದಿರುತ್ತಾರೆ. ಅಲ್ಲದೇ ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇಲ್ಲ ಎಂಬುದಾಗಿ ನುಡಿದಿರುತ್ತಾರೆ.

5. ಉಭಯ ಪಕ್ಷಗಾರರ ಪರ ವಾದ ವಿವಾದಗಳನ್ನು ಆಲಿಸಲಾಯಿತು. ಈ ಪ್ರಕರಣವನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ.

**<u>ಅಂಶಗಳು</u>**

1) ದಿನಾಂಕಃ 18-07-2024 ರಂದು ಸಂಜೆ 06.15 ಗಂಟೆ ಸಮಯದಲ್ಲಿ ಮಿಡಿಗೇಶಿ ಪೋಲೀಸ ಠಾಣಾ ವ್ಯಾಪ್ತಿಯ ಹೊಸಕೆರೆ ಕೆರೆ ಏರಿ ಹಿಂಭಾಗದಲ್ಲಿರುವ ಚಿಕ್ಕಣ್ಣನವರ ಜಮೀನಿನ ಬಳಿ ಹಾದುಹೋಗಿರುವ ಮಧುಗಿರಿ-ಪಾವಗಡ ರಸ್ತೆಯಲ್ಲಿ ಆರೋಪಿಯು ಚಾಸಾ-13ರವರ ಹೆಸರಿನಲ್ಲಿರುವ BOLERO PICK-UP ವಾಹನ ಸಂಖ್ಯೆ KA-06-AB-5721 ನೇ ವಾಹನವನ್ನು ಮಧುಗಿರಿ ಕಡೆಯಿಂದ ಪಾವಗಡ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿ

ಅಪಘಾತಪಡಿಸಿದ್ದು, ಆ ಮೂಲಕ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ.281 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸುವರೇ?

2) ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ವಾಹನವನ್ನು ಅತಿವೇಗದಿಂದ ಚಾಲನೆ ಮಾಡಿಕೊಂಡು ಹೋಗಿ ಎದರುಗಡೆಯಿಂದ ಬರುತ್ತಿದ್ದ KA-64-K-1699 SPLENDER PLUS ದ್ವಿ ಚಕ್ರವಾಹನಕ್ಕೆ ಡಿಕ್ಕಿ ಹೊಡೆಸಿದ ಪರಿಣಾಮ ದ್ವಿಚಕ್ರ ವಾಹನ ಓಡಿಸುತ್ತಿದ್ದ ನಿಜಲಿಂಗಪ್ಪರವರಿಗೆ ತಲೆಗೆ ಕಿವಿ ಮುಖಕ್ಕೆ, ಕೈ ಮತ್ತು ಕಾಲಿಗೆ ತೀವ್ರತರಹದ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮರಣ ಹೊಂದಲು ಕಾರಣವಾಗಿದ್ದು, ಆ ಮೂಲಕ ಆರೋಪಿ ಭಾರತೀಯ ನ್ಯಾಯ ಸಂಹಿತೆಯ ಕಲಂ 106 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸುವರೆ?

3) ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ BOLERO PICK-UP ವಾಹನವನ್ನು ಅತಿವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಅಪಘಾತಪಡಿಸಿ, ಅಪಘಾತದ ಬಗ್ಗೆ ಪೋಲಿಸರಿಗೆ ಮಾಹಿತಿ ತಿಳಿಸದೇ ಗಾಯಾಳುವನ್ನು ಉಪಚರಿಸದೇ ಅಪಘಾತಪಡಿಸಿದ ವಾಹನದೊಂದಿಗೆ ಪರಾರಿಯಾಗಿದ್ದು, ಮೋಟಾರು ವಾಹನ ಕಾಯ್ದೆ ಕಲಂ.134(ಎ ಮತ್ತು ಬಿ)

ಸಹಕಲಂ.187 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸುವರೆ?

4) ಯಾವ ಆಜ್ಞೆ ಅಥವಾ ಆದೇಶ ?

6. ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಮತ್ತು ಆರೋಪಿತನ ಪರ ವಕೀಲರ ವಾದವನ್ನು ಆಲಿಸಲಾಯಿತು ಹಾಗೂ ಕಡತದ ಮೇಲೆ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಯಿತು.

7. ಈ ಮೇಲೆ ಹೇಳಿದ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸುತ್ತೇನೆ.

| | | |
|---|---|---|
| ಅಂಶ ನಂ.1 | : | ನಕಾರಾತ್ಮಕವಾಗಿ |
| ಅಂಶ ನಂ.2 | : | ನಕಾರಾತ್ಮಕವಾಗಿ |
| ಅಂಶ ನಂ.3 | : | ನಕಾರಾತ್ಮಕವಾಗಿ |
| ಅಂಶ ನಂ.4 | : | ಕೊನೆಯ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

## ಕಾರಣಗಳು

8. **ಅಂಶ ನಂ.1 ರಿಂದ 3 :-** ಈ ಮೂರು ಅಂಶಗಳು ಆಂತರಿಕ ಸಂಬಂಧ ಹೊಂದಿರುವುದರಿಂದ ಹಾಗೂ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಎಲ್ಲ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ದಿನಾಂಕಃ 18-07-2024 ರಂದು ಸಂಜೆ 06.15 ಗಂಟೆ ಸಮಯದಲ್ಲಿ ಮಿಡಿಗೇಶಿ ಪೋಲೀಸ ಠಾಣಾ ವ್ಯಾಪ್ತಿಯ ಹೊಸಕೆರೆ ಕೆರೆ ಏರಿ ಹಿಂಭಾಗದಲ್ಲಿರುವ ಚಿಕ್ಕಣ್ಣನವರ ಜಮೀನಿನ ಬಳಿ ಹಾದುಹೋಗಿರುವ ಮಧುಗಿರಿ-ಪಾವಗಡ ರಸ್ತೆಯಲ್ಲಿ

ಆರೋಪಿಯು ಚಾಸಾ-13ರವರ ಹೆಸರಿನಲ್ಲಿರುವ KA-06-AB-5721 BOLERO PICK-UP ನೇ ವಾಹನವನ್ನು ಮಧುಗಿರಿ ಕಡೆಯಿಂದ ಪಾವಗಡ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಎದರುಗಡೆಯಿಂದ ಬರುತ್ತಿದ್ದ KA-64-K-1699 SPLENDER PLUS ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿದ ಪರಿಣಾಮ ದ್ವಿಚಕ್ರ ವಾಹನ ಓಡಿಸುತ್ತಿದ್ದ ನಿಜಲಿಂಗಪ್ಪರವರಿಗೆ ತಲೆಗೆ ಕಿವಿ ಮುಖಕ್ಕೆ, ಕೈ ಮತ್ತು ಕಾಲಿಗೆ ತೀವ್ರತರಹದ ಪೆಟ್ಟು ಬಿದ್ದು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆತಂದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವುದಾಗಿ ತಿಳಿಸಿದ್ದು, ಆರೋಪಿ ಅಪಘಾತ ಮಾಡಿ, ಅಪಘಾತದ ಬಗ್ಗೆ ಪೋಲಿಸರಿಗೆ ಮಾಹಿತಿ ತಿಳಿಸದೇ ಮತ್ತು ಗಾಯಾಳುವನ್ನು ಉಪಚರಿಸದೇ ಅಪಘಾತಪಡಿಸಿದ ವಾಹನದೊಂದಿಗೆ ಪರಾರಿಯಾಗಿರುತ್ತಾರೆ ಎಂಬುದು ಅಭಿಯೋಜನೆ ಪ್ರಕರಣದ ಸಾರಾಂಶವಾಗಿರುತ್ತದೆ. ಈ ಅಂಶಗಳನ್ನು ಸಾಬೀತು ಪಡಿಸಲು ಅಭಿಯೋಜನೆಯ ಪ್ರಾಸಾ-1 ರಿಂದ 11 ರವರ ಸಾಕ್ಷ್ಯ ಹಾಗೂ ನಿಪಿ-1 ರಿಂದ 29ರಂತಹ ದಾಖಲಾತಿಗಳ ಮೇಲೆ ಅವಲಂಬಿತವಾಗಿರುತ್ತದೆ.

10. ಪ್ರಸ್ತುತ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರ ಸಾಕ್ಷ್ಯ ಪುರಾವೆಯನ್ನು ಚರ್ಚಿಸುವುದಕ್ಕಿಂತ ಮೊದಲು ಅಭಿಯೋಜನೆ ಆರೋಪಿ ವಿರುದ್ಧ ಮಾಡಲಾದ ಆರೋಪಗಳನ್ನು ರುಜುವಾತುಪಡಿಸಲು ಯಾವ ಘಟಕಾಂಶಗಳನ್ನು ಸಾಬೀತು ಪಡಿಸುವ ಅವಶ್ಯಕತೆ ಇದೆ ಎಂಬುದು ಸೂಕ್ತವಾಗಿರುತ್ತದೆ. ಆ ಕಾರಣ ಭಾರತೀಯ ನ್ಯಾಯ ಸಂಹಿತೆಯ ಕಲಂ 281 ರಡಿಯಲ್ಲಿ ಅಪರಾಧವಾಗಬೇಕಾದರೆ ಈ ಕೆಳಕಂಡ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯ ಮೀರಿ ರುಜುವಾತುಪಡಿಸಬೇಕಾಗುತ್ತದೆ.

**1. ಆರೋಪಿತನು ವಾಹನವನ್ನು ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು.**

**2. ಆರೋಪಿತನು ಸಾರ್ವಜನಿಕ ರಸ್ತೆಯಲ್ಲಿ ವಾಹನವನ್ನು ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು.**

**3. ಆರೋಪಿತನು ಆ ವಾಹನವನ್ನು ಮನುಷ್ಯನ ಪ್ರಾಣಕ್ಕೆ ಅಪಾಯ ಉಂಟಾಗುವಂತೆ ಅಥವಾ ಇತರೆ ಯಾವುದೇ ವ್ಯಕ್ತಿಗೆ ಗಾಯವನ್ನು ಅಥವಾ ಕ್ಷತಿಯನ್ನು ಉಂಟು ಮಾಡುವಂತೆ ದುಡುಕಿನಿಂದ ಅಥವಾ ನಿರ್ಲಕ್ಷತನದಿಂದ ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು.**

11. ಭಾರತೀಯ ನ್ಯಾಯ ಸಂಹಿತೆಯ ಕಲಂ 106 ರಡಿಯಲ್ಲಿ ದಂಡನೀಯವಾದ ಅಪರಾಧವಾಗಬೇಕಾದರೆ ಈ ಕೆಳಕಂಡಂತೆ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯ ಮೀರಿ ರುಜುವಾತುಪಡಿಸಬೇಕು.

1) **ಆರೋಪಿ ತಾನು ಸಾದಾ ಮತ್ತು ತೀವ್ರ ಸ್ವರೂಪದ ಗಾಯಗಳನ್ನು ಉಂಟುಮಾಡಲು ಕಾರಣನಾಗಿದ್ದಾನೆ.**

2) **ಆರೋಪಿತನು ನಿರ್ಲಕ್ಷತೆಯಿಂದ ಅಥವಾ ನಿರ್ಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ವಾಹನವನ್ನು ನಡೆಸಿದ್ದರಿಂದ ಘಟನೆ ಸಂಭವಿಸಿದೆ. ಇದರಿಂದ ಒಬ್ಬ ವ್ಯಕ್ತಿ ಮೃತಪಟ್ಟಿರುತ್ತಾರೆ.**

12. ಭಾರತೀಯ ನ್ಯಾಯ ಸಂಹಿತೆಯ ಕಲಂ. 134(ಎ ಮತ್ತು ಬಿ), 187 ರಡಿಯಲ್ಲಿ ದಂಡನೀಯವಾದ ಅಪರಾಧವಾಗಬೇಕಾದರೆ ಈ ಕೆಳಕಂಡಂತೆ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯ ಮೀರಿ ರುಜುವಾತುಪಡಿಸಬೇಕು.

**1) ಆರೋಪಿ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡಿ ಕೊಂಡು ಹೋಗಿ ಅಪಘಾತಪಡಿಸಿ, ಗಾಯಾಳುವನ್ನು ಉಪಚರಿಸದೇ ಅಪಘಾತದ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡದೇ ವಾಹನದೊಂದಿಗೆ ಸ್ಥಳದಿಂದ ಪರಾರಿಯಾಗಿರುತ್ತಾರೆ.**

13. ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಯವರು ಒಟ್ಟು 19 ಜನ ಸಾಕ್ಷಿದಾರರನ್ನು ಸಾಕ್ಷ್ಯಪಟ್ಟಿಯಲ್ಲಿ ಸೇರಿಸಿದ್ದು, ಪ್ರಕರಣ ವಿಚಾರಣೆಯ ಹಂತದಲ್ಲಿ ಆರೋಪಿ ಪರ ವಕೀಲರು ಮತ್ತು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಮ್ಮತಿ ಮೇರೆಗೆ ನಿಪಿ-22 ರಿಂದ 24 ರಂತಹ ದಾಖಲೆಗಳಾದ ಶವ ಪಂಚನಾಮೆ, ಶವ ಪರೀಕ್ಷಾ ವರದಿ ಮತ್ತು ಐಎಂವಿ ವರದಿಗಳನ್ನು ನಿಶಾನೆಗೊಳಿಸಿದ್ದು ಆ ಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ಚಾಸಾ-7 ರಿಂದ 12, ಚಾಸಾ-14 ಮತ್ತು 15 ರವರನ್ನು ವಿಚಾರಣೆಯಿಂದ ಕೈಬಿಡಲಾಗಿರುತ್ತದೆ. ಒಟ್ಟು 11 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 11 ಎಂದು ವಿಚಾರಣೆಗೆ ಒಳಪಡಿಸಲಾಗಿರುತ್ತದೆ.

14. ಅಭಿಯೋಜನೆಯು ವಿಚಾರಣೆ ಮಾಡಲಾದ ಪ್ರಾಸಾ-1 ಲಕ್ಷ್ಮೀದೇವಮ್ಮ ಕೋಂ ಸೀಗಣ್ಣ ಎಂಬುವವರನ್ನು ಈ ಅಪಘಾತಕ್ಕೆ ಸಂಬಂಧಿಸಿದಂತೆ ದೂರುದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ತನ್ನ ಮುಖ್ಯ ವಿಚಾರಣೆಯಲ್ಲಿ ಮೃತ ನಿಜಲಿಂಗಪ್ಪ ತನ್ನ ಮಗ, ಕಳೆದ ಒಂದು ವರ್ಷದ ಹಿಂದೆ ತನ್ನ ಮಗ ನಿಜಲಿಂಗಪ್ಪ ಜೋಳ ತರಲು ತಮ್ಮ ಊರಿಂದ ಮಧುಗಿರಿಗೆ ಬೈಕ್ ಮೂಲಕ ಹೋಗಿದ್ದು ವಾಪಸ್ಸು ಊರಿಗೆ ಬರುತ್ತಿರುವಾಗ ಒಂದು ಬುಲೇರೋ ವಾಹನ ತನ್ನ ಮಗನಿಗೆ ಡಿಕ್ಕಿ ಪಡಿಸಿತು ಎಂಬ ವಿಚಾರವನ್ನು ಚಾಸಾ-2 ರವರು ತನಗೆ ತಿಳಿಸಿದ್ದು, ಆನಂತರ ತನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆತ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ. ಈ ಬಗ್ಗೆ ನಿಪಿ-1 ರಂತಹ ದೂರು ನೀಡಿರುತ್ತೇನೆ ಎಂಬುದಾಗಿ ನುಡಿದಿರುತ್ತಾರೆ. ಆದರೆ ತನ್ನ ಪಾಟೀಸವಾಲಿನಲ್ಲಿ ಆ

ದೂರನ್ನು ಪೋಲಿಸರೇ ಬರೆದು ಕೊಂಡಿದ್ದು ಅದರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ ಎಂಬುದಾಗಿ ಒಪ್ಪಿರುತ್ತಾರೆ. ಅದೇರೀತಿ ಈ ಅಪಘಾತ ತನ್ನ ಮಗನ ತಪ್ಪಿನಿಂದಲೇ ಆಗಿರುತ್ತದೆ ಎಂಬ ಅಂಶಗಳನ್ನು ಸುಳ್ಳು ಎಂಬುದಾಗಿ ಅಲ್ಲಗಳೆದಿರುತ್ತಾರೆ. ಆದರೆ ಈ ಸಾಕ್ಷಿ ಈ ಘಟನೆಯನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಮತ್ತು ಆ ದಿನ ಆರೋಪಿ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಈ ಅಪಘಾತ ಆಗಿದೆ ಎಂಬ ಬಗ್ಗೆ ಯಾವುದೇ ಸಾಕ್ಷ್ಯ ನುಡಿಯದೇ ಇರುವುದರಿಂದ ಈ ಸಾಕ್ಷಿ ಸಾಕ್ಷ್ಯದ ಆಧಾರದ ಮೇಲೆ ಆರೋಪಿ ಈ ಮೇಲೆ ಹೇಳಲಾದ ಆರೋಪಗಳನ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಬರುವುದಿಲ್ಲ.

15. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-2 ಶ್ರೀರಂಗಪ್ಪ ಬಿನ್ ರಂಗಪ್ಪ ಎಂಬುವವರನ್ನು ಈ ಅಪಘಾತಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿಯು ದಿನಾಂಕ 18-07-2024ರಂದು ಮೃತ ನಿಜಲಿಂಗಪ್ಪನವರು ತನ್ನ ಬೈಕ ಮೂಲಕ ಮಧುಗಿರಿಗೆ ಜೋಳ ತರಲು ಹೋಗುತ್ತಿದ್ದಾಗ ಹೊಸಕೆರೆ ಏರಿ ಬಳಿ ಮಧುಗಿರಿ ಕಡೆಯಿಂದ ಒಂದು ಬುಲೇರೋ ವಾಹನ ಬಂದು ನಿಜಲಿಂಗಪ್ಪನವರಿಗೆ ಡಿಕ್ಕಿ ಪಡಿಸಿದ್ದು ಆ ಸಂದರ್ಭದಲ್ಲಿ ತಾನು ಆ ಬೈಕ್ ಹಿಂದುಗಡೆಯಲ್ಲಿ ಹೋಗುತ್ತಿದ್ದು ತಕ್ಷಣ ಹೋಗಿ ನೋಡಲಾಗಿ ಆತನ ತಲೆಗೆ ಮತ್ತು ಕಾಲುಗಳಿಗೆ ಪೆಟ್ಟಾಗಿದ್ದು, ಆ ಬಗ್ಗೆ ಮಾಹಿತಿಯನ್ನು ಚಾಸಾ-1ರವರಿಗೆ ತಿಳಿಸಿರುವುದಾಗಿ ನುಡಿದಿರುತ್ತಾರೆ. ಅಲ್ಲದೇ ಆ ಬುಲೇರೋ ವಾಹನಕ್ಕೆ ಸಂಬಂಧಿಸಿದ 4 ಫೋಟೋಗಳನ್ನು ನೋಡಿ ಆ ವಾಹನವನ್ನು ಗುರ್ತಿಸಿರುತ್ತಾರೆ. ಆದರೆ ಈ ಸಾಕ್ಷಿ ತನ್ನ ಮುಖ್ಯ ವಿಚಾರಣೆಯಲ್ಲಿ ಆ ಬುಲೇರೋ ವಾಹನದ ಚಾಲಕನನ್ನು ತಾನು ನೋಡಿರುವುದಿಲ್ಲ ಎಂಬುದಾಗಿ ಮತ್ತು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ ನಿಪಿ-2 ರಿಂದ 5 ಫೋಟೊ ಮತ್ತು ನಿಪಿ-6

ರಿಂದ 9 ರಂತಹ ಬೈಕಿಗೆ ಸಂಬಂಧಪಟ್ಟ ಫೋಟೋಗಳನ್ನು ಗುರ್ತಿಸಿರುತ್ತಾರೆ. ಮುಂದುವರೆದು, ಈ ಸಾಕ್ಷಿ ತನ್ನ ಪಾಟೀಸವಾಲಿನಲ್ಲಿ ಈ ಎರಡು ರಸ್ತೆಗಳ ಮಧ್ಯೆ ರಸ್ತೆ ವಿಭಜಕಗಳನ್ನು ಬಿಳಿ ಬಣ್ಣದಿಂದ ಗುರುತಿಸಿರುತ್ತಾರೆ ಎಂದರೆ ಸರಿ ಎಂಬುದಾಗಿ ಒಪ್ಪಿರುತ್ತಾರೆ. ಅದೇರೀತಿ ಈ ಸಾಕ್ಷಿ ತನ್ನ ಪಾಟೀಸವಾಲಿನಲ್ಲಿ ಯಾವುದೇ ವಾಹನ ಆ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿರುವುದರಿಂದ ಅತಿವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ ಎಂಬುದಾಗಿ ಅಲ್ಲಗಳೆದಿರುತ್ತಾರೆ. ಆದರೆ ಆ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿರುತ್ತವೆ ಎಂಬ ಅಂಶಗಳನ್ನು ಒಪ್ಪಿರುತ್ತಾರೆ. ಈ ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಲಾಗಿ ಆ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿರುವುದರಿಂದ ಯಾವುದೇ ವಾಹನಗಳು ಅತಿವೇಗವಾಗಿ ಚಲಾಯಿಸಲು ಸಾಧ್ಯವಿರುವುದಿಲ್ಲ. ಬದಲಾಗಿ ಈ ಸಾಕ್ಷಿ ಸ್ವತಃ ಆ ಬುಲೇರೋ ವಾಹನದ ಚಾಲಕನನ್ನು ನೋಡಿರುವುದಿಲ್ಲ ಎಂಬುದಾಗಿ ಒಪ್ಪಿರುವುದರಿಂದ ಈ ಸಾಕ್ಷಿ ಈ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವ ಬಗ್ಗೆ ಮತ್ತು ಆರೋಪಿ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಈ ಅಪಘಾತವಾಗಿರುವ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ.

16. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-3 ಸಿದ್ದಪ್ಪ ಬಿನ್ ಮುದ್ದಣ್ಣ ಎಂಬುವವರನ್ನು ಈ ಅಪಘಾತಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿಯು ಸಹ ದಿನಾಂಕ 18-07-2024ರಂದು ಮೃತ ನಿಜಲಿಂಗಪ್ಪನವರು ತನ್ನ ಬೈಕ ಮೂಲಕ ಜೋಳ ತರಲು ಮಧುಗಿರಿಗೆ ಹೋಗುತ್ತಿದ್ದಾಗ ಮಧುಗಿರಿ ಕಡೆಯಿಂದ ಪಾವಗಡ ಕಡೆಗೆ ಬರುತ್ತಿದ್ದ ಒಂದು ಬುಲೇರೋ ವಾಹನ ಬಂದು ನಿಜಲಿಂಗಪ್ಪನವರಿಗೆ ಡಿಕ್ಕಿ ಪಡಿಸಿದ್ದು ತಕ್ಷಣ ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿದ್ದು ಅವರು ಮೃತ ಪಟ್ಟಿರುತ್ತಾರೆ ಎಂಬುದಾಗಿ ವೈದ್ಯರು ತಿಳಿಸಿದರು ಎಂದು ನುಡಿದಿರುತ್ತಾರೆ. ಆನಂತರ ಈ ಬಗ್ಗೆ ಪೋಲಿಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ನಿಪಿ-11

ರಂತಹ ಸ್ಥಳ ಪಂಚನಾಮೆ ಮಾಡಿ, ನಿಪಿ-12 ರಿದ 15 ರಂತಹ ಫೋಟೋಗಳನ್ನು ಗುರುತಿಸಿರುತ್ತಾರೆ. ಅಲ್ಲದೇ ಅದೇ ದಿನ ಪೋಲಿಸರು ನಿಪಿ-15ರಂತಹ ಅಮಾನತ್ತು ಪಂಚನಾಮೆ ಮಾಡಿ ಅಪಘಾತ ಪಡಿಸಿದ ವಾಹನವನ್ನು ಅಮಾನತ್ತು ಪಡಿಸಿಕೊಂಡರು ಎಂಬುದಾಗಿ ನುಡಿದಿರುತ್ತಾರೆ. ಅದರೆ ಈ ಸಾಕ್ಷಿ ಆ ಬುಲೇರೋ ವಾಹನದ ಚಾಲಕನನ್ನು ತಾನು ನೋಡಿಲ್ಲ ಮತ್ತು ನಿಪಿ-11 ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-15ರಂತಹ ಅಮಾನತ್ತು ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂಬುದಾಗಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು ಈ ಸಾಕ್ಷಿ ತನ್ನ ಪಾಟೀಸವಾಲಿನಲ್ಲಿ ಅಮಾನತ್ತು ಪಂಚನಾಮೆ ಮತ್ತು ಸ್ಥಳ ಪಂಚನಾಮೆಯಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ ಮತ್ತು ಈ ಅಪಘಾತವನ್ನು ಸುಮಾರು 30 ಅಡಿ ದೂರದಿಂದ ನೋಡಿರುವುದರಿಂದ ಮತ್ತು ಆ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿರುವುದರಿಂದ ಯಾವುದೇ ವಾಹನಗಳು ಅತಿವೇಗವಾಗಿ ಬಂದರೆ ಮುಗುಚಿ ಬೀಳುವ ಸಾಧ್ಯತೆ ಇದೆ ಎಂದರೆ ಸರಿ ಎಂದು ಒಪ್ಪಿದ್ದು ಈ ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಲಾಗಿ ಈ ಸಾಕ್ಷಿಯು ಆರೋಪಿಯನ್ನು ಗುರುತಿಸಿರುವುದಿಲ್ಲ ಮತ್ತು ಆ ಸ್ಥಳದಲ್ಲಿರುವ ರಸ್ತೆ ತಿರುವಿನಿಂದ ಕೂಡಿರುವುದರಿಂದ ಅತಿವೇಗವಾಗಿ ಯಾವುದೇ ವಾಹನಗಳು ಬಂದರೆ ಮುಗುಚಿ ಬೀಳುವ ಸಾಧ್ಯತೆ ಇದೆ ಎಂಬ ಅಂಶಗಳನ್ನು ಒಪ್ಪಿರುವುದರಿಂದ ಈ ಅಪಘಾತವು ಆರೋಪಿ ತಪ್ಪಿನಿಂದ ಆಗಿರುತ್ತದೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ. ಅಲ್ಲದೇ ಈ ಸಾಕ್ಷಿದಾರರು ಸ್ವತಃ ನಿಪಿ-11 ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-15ರಂತಹ ಅಮಾನತ್ತು ಪಂಚನಾಮೆಯಲ್ಲಿರುವ ಅಂಶಗಳು ತನಗೆ ಗೊತಿಲ್ಲ ಎಂಬುದಾಗಿ ನುಡಿದಿರುವುದರಿಂದ ಅಭಿಯೋಜನೆಯ ಈ ಸಾಕ್ಷಿದಾರರ ಸಾಕ್ಷ್ಯದ ಮೂಲಕ ಈ ಕೇಸಿನ ತನಿಖಾಧಿಕಾರಿಯವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ನಿಪಿ-11 ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-15ರಂತಹ ಅಮಾನತ್ತು

ಪಂಚನಾಮೆಯನ್ನು ಮಾಡಿದ್ದಾರೆ ಎಂಬ ಅಂಶಗಳನ್ನು ಸಾಬೀತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಹೇಳಬಹುದಾಗಿದೆ.

17. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-4 ದಾಸಪ್ಪ ಬಿನ್ ತಿಮ್ಮಯ್ಯ ಎಂಬುವವರನ್ನು ಈ ಘಟನೆಗೆ ಸಂಬಂಧಿಸಿದಂತೆ ಮೃತ ನಿಜಲಿಂಗಪ್ಪನವರ ಶವ ಪಂಚನಾಮೆ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ನಿಪಿ-16ರಂತಹ ಶವ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಆದರೆ ಆ ಶವ ಪಂಚನಾಮೆಯಲ್ಲಿ ಬರೆದಿರುವ ವಿಚಾರ ತಮಗೆ ಗೊತ್ತಿಲ್ಲ ಮತ್ತು ನಿಪಿ-17 ಮತ್ತು 18 ರಂತಹ ಫೋಟೋಗಳನ್ನು ಯಾವ ಉದ್ದೇಶಕ್ಕಾಗಿ ತೆಗೆದರು ಎಂಬುದು ತಮಗೆ ಗೊತ್ತಿಲ್ಲ ಎಂಬುದಾಗಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣ ಅಭಿಯೋಜನೆಯು ಈ ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಈ ಕೇಸಿನ ತನಿಖಾಧಿಕಾರಿಯವರು ನಿಪಿ-16ರಂತಹ ಶವ ಪಂಚನಾಮೆ ಮತ್ತು ನಿಪಿ-17 ಮತ್ತು 18 ರಂತಹ ಫೋಟೋಗಳನ್ನು ತೆಗೆದರು ಎಂಬ ಅಂಶಗಳನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

18. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-5 ಈರಣ್ಣ ಬಿನ್ ಸಣ್ಣೀರಣ್ಣ ಮತ್ತು ಪ್ರಾಸಾ-6 ನಾಗರಾಜು ಬಿನ್ ದಾಸಪ್ಪ ಎಂಬುವವರನ್ನು ಈ ಘಟನೆಗೆ ಸಂಬಂಧಿಸಿದಂತೆ ನಿಪಿ-11ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-15ರಂತಹ ಅಮಾನತ್ತು ಪಂಚನಾಮೆಯ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಇಬ್ಬರೂ ಸಾಕ್ಷಿದಾರರು ಸಹ ಸ್ಥಳ ಮತ್ತು ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು ಮಾತ್ರ ಗುರುತಿಸಿರುತ್ತಾರೆ. ಆದರೆ ಅವುಗಳಲ್ಲಿ ಬರೆದಿರುವ ವಿಚಾರ ತಮಗೆ ಗೊತ್ತಿಲ್ಲ ಮತ್ತು ತಮ್ಮ ಸಮಕ್ಷಮ ಪೋಲಿಸರು ಯಾವುದೇ ವಾಹನಗಳನ್ನು ಅಮಾನತ್ತು

ಪಡಿಸಿಕೊಂಡಿಲ್ಲ ಎಂಬುದಾಗಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣ ಅಭಿಯೋಜನೆಯು ಈ ಸಾಕ್ಷಿದಾರರ ಸಾಕ್ಷ್ಯದ ಮೂಲಕ ಈ ಕೇಸಿನ ತನಿಖಾಧಿಕಾರಿಯವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ನಿಪಿ-11ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-15ರಂತಹ ಅಮಾನತ್ತು ಪಂಚನಾಮೆ ಮಾಡಿ ಅಪಘಾತಕ್ಕೊಳಗಾದ ದ್ವಿಚಕ್ರ ವಾಹನ ಸಂಖ್ಯೆ ಕೆಎ-64-ಕೆ-1699 ಮತ್ತು ಅಪಘಾತ ಪಡಿಸಿದ ಬುಲೇರೋ ವಾಹನ ಸಂಖ್ಯೆ ಕೆಎ-06-ಎಬಿ-5721ರ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವ ಅಂಶಗಳನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

19. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-7 ಪರಮೇಶ್ ಬಿನ್ ಚಿಕ್ಕನರಸಪ್ಪ ಎಂಬುವವರನ್ನು ಅಪಘಾತ ಪಡಿಸಿದ ಬುಲೇರೋ ಪಿಕಅಪ್ ವಾಹನ ಸಂಖ್ಯೆ ಕೆಎ-06-ಎಬಿ-5721ರ ವಾಹನದ ಮಾಲೀಕರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ಮೋಟಾರ ವಾಹನ ಕಾಯ್ದೆ ಕಲಂ.133 ರಡಿ ನೀಡಲಾದ ನೋಟಿಸ್ ಪ್ರತಿ ಮತ್ತು ಅದಕ್ಕೆ ನೀಡಲಾದ ಉತ್ತರದ ಪ್ರತಿಗಳಲ್ಲಿನ ತಮ್ಮ ಸಹಿಗಳನ್ನು ಗುರ್ತಿಸಿರುತ್ತಾರೆ. ಆದರೆ ಅದರಲ್ಲಿ ಬರೆದ ವಿಚಾರ ತನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ನಿಪಿ-21 ರಂತಹ ಇಂಡಿಮಿನಿಟಿ ಬಾಂಡ್ ಬರೆದುಕೊಟ್ಟು ಆ ವಾಹನವನ್ನು ತನ್ನ ವಶಕ್ಕೆ ಪಡೆದುಕೊಂಡಿರುವ ಬಗ್ಗೆ ನುಡಿದಿರುತ್ತಾರೆ. ಆದರೆ ಈ ಸಾಕ್ಷಿ ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಈ ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಈ ಅಪಘಾತ ಆರೋಪಿಯ ತಪ್ಪಿನಿಂದಲೇ ಆಗಿದೆ ಎಂದು ನಿರ್ಧರಿಸಲು ಬರುವುದಿಲ್ಲ.

20. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-8 ರವಿ ಟಿ.ಎನ್. ಪಿ.ಎಸ್.ಐ., ಈ ಕೇಸಿನ ಭಾಗಶಃ ತನಿಖಾಧಿಕಾರಿಯಾಗಿ ವಿಚಾರಣೆ ಮಾಡಿದ್ದು, ತಮ್ಮ

ಮುಖ್ಯ ವಿಚಾರಣೆಯಲ್ಲಿ ಈ ಸಾಕ್ಷಿ ದಿನಾಂಕ 18.07.2024 ರಂದು ರಾತ್ರಿ 08.00 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ-1ರಂತಹ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ಸಂ.72/2024 ರಂತೆ ಪ್ರಕರಣವನ್ನು ದಾಖಲಿಸಿ, ನಿಪಿ-25 ರಂತಹ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿದ್ದು ಹಾಗೂ ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-18 ರವರಿಗೆ ವಹಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-8 ರವರು ಈ ಅಪಘಾತಕ್ಕೆ ಸಂಬಂದಪಟ್ಟ ಭಾಗಶಃ ತನಿಖಾಧಿಕಾರಿಯಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಆದರೆ ಇವರ ಸಾಕ್ಷ್ಯಕ್ಕೆ ಪೂರಕವಾಗಿ ದೂರುದಾರರು, ಸ್ಥಳ ಪಂಚನಾಮೆ ಸಾಕ್ಷಿದಾರರು, ಅಮಾನತ್ತು ಪಂಚನಾಮೆ ಸಾಕ್ಷಿದಾರರು ಮತ್ತು ಶವ ಪರೀಕ್ಷಾ ವರದಿಯ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯೇ ಮೇಲೆ ಹೇಳಲಾದ ಆರೋಪಗಳ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

21. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-9 ಲಕ್ಷ್ಮೀನಾರಾಯಣ ಎನ್. ಪೋಲಿಸ್ ಮುಖ್ಯ ಪೇದೆ, ಈ ಕೇಸಿನ ತನಿಖಾ ಸಹಾಯಕರಾಗಿ ವಿಚಾರಣೆ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಾಕ್ಷಿ ದಿನಾಂಕ 19.07.2024 ರಂದು ಚಾಸಾ-18 ರವರು ಹೇಳಿದಂತೆ ನಿಪಿ-16ರಂತಹ ಶವ ಪಂಚನಾಮೆ ವರದಿ ಮತ್ತು ಚಾಸಾ-19 ರವರು ಹೇಳಿದಂತೆ ನಿಪಿ-11 ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-15 ರಂತಹ ಅಮಾನತ್ತು ಪಂಚನಾಮೆಯನ್ನು ಲ್ಯಾಪಟಾಪ್‌ನಲ್ಲಿ ಬೆರಳಚ್ಚು ಮಾಡಿದ್ದು, ಅದಕ್ಕೆ ಸಂಬಂಧಪಟ್ಟಂತೆ ನಿಪಿ-12 ರಿಂದ 14 ರಂತಹ ಫೋಟೋ ತೆಗೆದು, ಬುಲೆರೋ

ವಾಹನಕ್ಕೆ ಸಂಬಂಧಪಟ್ಟ ನಿಪಿ-2 ರಿಂದ 5ರಂತಹ 4 ಫೋಟೋಗಳನ್ನು ಹಾಗೂ ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟ ನಿಪಿ-6 ರಿಂದ 9ರಂತಹ 4 ಫೋಟೋಗಳನ್ನು ತೆಗೆದು ನಿಪಿ-26 ರಂತಹ ಒಂದು ಸಿಡಿಯನ್ನು ಹಾಗೂ ನಿಪಿ-27ರಂತಹ ದೃಡೀಕರಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-9 ರವರು ಈ ಅಪಘಾತಕ್ಕೆ ಸಂಬಂದಪಟ್ಟ ಭಾಗಶಃ ತನಿಖಾ ಸಹಾಯಾಕರಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಆದರೆ ಇವರ ಸಾಕ್ಷ್ಯಕ್ಕೆ ಪೂರಕವಾಗಿ ದೂರುದಾರರು, ಸ್ಥಳ ಪಂಚನಾಮೆ ಸಾಕ್ಷಿದಾರರು, ಅಮಾನತ್ತು ಪಂಚನಾಮೆ ಸಾಕ್ಷಿದಾರರು ಮತ್ತು ಶವ ಪರೀಕ್ಷಾ ವರದಿಯ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯೇ ಮೇಲೆ ಹೇಳಲಾದ ಆರೋಪಗಳ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

22. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-10 ಹೆಚ್.ಜಿ. ಹನುಮಂತರಾಯಪ್ಪ, ಸಿ.ಪಿ.ಐ., ಈ ಕೇಸಿನ ತನಿಖಾಧಿಕಾರಿಯಾಗಿ ವಿಚಾರಣೆ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಾಕ್ಷಿ ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-11 ರಂತಹ ಕೃತ್ಯ ಸ್ಥಳ ಪಂಚನಾಮೆಯನ್ನು ಹಾಗೂ ನಿಪಿ-28 ರಂತಹ ಕಚ್ಚಾ ನಕಾಶೆಯನ್ನು ತಯಾರಿಸಿದ್ದು, ನಿಪಿ-15ರಂತಹ ಅಮಾನತ್ತು ಪಂಚನಾಮೆಯನ್ನು ಜರುಗಿಸಿ, ನಿಪಿ-12 ರಿಂದ 14 ರಂತಹ ಫೋಟೋವನ್ನು ತೆಗೆದಿದ್ದು, ಬುಲೆರೋ ಹಾಗೂ ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟ ನಿಪಿ-2 ರಿಂದ 9 ರಂತಹ ಫೋಟೋಗಳನ್ನು ತೆಗೆದು ನಿಪಿ-26ರಂತಹ ಒಂದು ಸಿಡಿಯನ್ನು ಹಾಗೂ ನಿಪಿ-27ರಂತಹ ದೃಡೀಕರಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿ, ಅಪಘಾತ ಪಡಿಸಿದ ವಾಹನದ ಮಾಲೀಕರಿಗೆ ನಿಪಿ-19 ರಂತೆ

ನೋಟಿಸ್ ಜಾರಿ ಮಾಡಿ ಅವರಿಂದ ನಿಪಿ-20ರಂತಹ ಪ್ರತ್ಯುತ್ತರ ಪಡೆದು, ಬುಲೆರೋ ಮತ್ತು ದ್ವಿಚಕ್ರ ವಾಹನವನ್ನು ನಿಪಿ-21 ಮತ್ತು ನಿಪಿ-29 ರಂತಹ ಎರಡು ಇಂಡಿಮಿನಿಟಿ ಬಾಂಡ್ ಪಡೆದು ಅವುಗಳ ಮಾಲೀಕರ ವಶಕ್ಕೆ ಬಿಡುಗಡೆಗೊಳಿಸಿದ್ದು, ಚಾಸಾ-2 ಮತ್ತು 3 ರವರ ಹೇಳಿಕೆ ಪಡೆದು, ಚಾಸಾ-15 ರವರಿಂದ ನಿಪಿ-22 ಮತ್ತು 23 ರಂತಹ ಎರಡು ವಾಹನಗಳ ಐ.ಎಂ.ವಿ. ವರದಿಗಳನ್ನು ಪಡೆದು, ಸಂಬಂಧಪಟ್ಟ ವೈದ್ಯಾಧಿಕಾರಿಗಳಿಂದ ನಿಪಿ-24 ರಂತಹ ಮೃತನ ಶವ ಪರೀಕ್ಷಾ ವರದಿಯನ್ನು ಪಡೆದು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿರುವ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-10ರವರು ಈ ಅಪಘಾತಕ್ಕೆ ಸಂಬಂದಪಟ್ಟ ತನಿಖಾಧಿಕಾರಿಯಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಆದರೆ ಇವರ ಸಾಕ್ಷ್ಯಕ್ಕೆ ಪೂರಕವಾಗಿ ದೂರುದಾರರು, ಸ್ಥಳ ಪಂಚನಾಮೆ ಸಾಕ್ಷಿದಾರರು, ಅಮಾನತ್ತು ಪಂಚನಾಮೆ ಸಾಕ್ಷಿದಾರರು ಮತ್ತು ಶವ ಪರೀಕ್ಷಾ ವರದಿಯ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯೇ ಮೇಲೆ ಹೇಳಲಾದ ಆರೋಪಗಳ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

23. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-11 ಪಿ.ಎಂ.ಅಮ್ಮಣ್ಣಗಿ ಪಿ.ಎಸ್.ಐ., ಈ ಕೇಸಿನ ಭಾಗಶಃ ತನಿಖಾಧಿಕಾರಿಯಾಗಿ ವಿಚಾರಣೆ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಾಕ್ಷಿ ದಿನಾಂಕ 19.07.2024 ರಂದು ಚಾಸಾ-19ರವರ ಆದೇಶದಂತೆ ಚಾಸಾ-6 ರಿಂದ 8 ರವರ ಸಮಕ್ಷಮ ನಿಪಿ-16ರಂತಹ ಶವ ತನಿಖಾ ವರದಿಯನ್ನು ನಡೆಸಿದ್ದು, ಚಾಸಾ-9 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು ಹಾಗೂ ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-19 ರವರಿಗೆ

ವಹಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾ.ಸಾ-11 ರವರು ಈ ಅಪಘಾತಕ್ಕೆ ಸಂಬಂದಪಟ್ಟ ಭಾಗಶಃ ತನಿಖಾಧಿಕಾರಿಯಾಗಿದ್ದು ಅವರು ತಾವು ತನಿಖಾ ಹಂತದಲ್ಲಿ ನಿರ್ವಹಿಸಿದ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಆದರೆ ಇವರ ಸಾಕ್ಷ್ಯಕ್ಕೆ ಪೂರಕವಾಗಿ ದೂರುದಾರರು, ಸ್ಥಳ ಪಂಚನಾಮೆ ಸಾಕ್ಷಿದಾರರು, ಅಮಾನತ್ತು ಪಂಚನಾಮೆ ಸಾಕ್ಷಿದಾರರು ಮತ್ತು ಶವ ಪರೀಕ್ಷಾ ವರದಿಯ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯೇ ಮೇಲೆ ಹೇಳಲಾದ ಆರೋಪಗಳನ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

24. ಅಭಿಯೋಜನೆ ವಿಚಾರಣೆ ಮಾಡಲಾದ ಸಾಕ್ಷಿದಾರರ ಸಾಕ್ಷ್ಯ ಹಾಜರುಪಡಿಸಲಾದ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಈ ಪ್ರಕರಣದಲ್ಲಿ ಈ ಅಪಘಾತವಾದ ಸ್ಥಳದಲ್ಲಿಯೇ ಮೃತ ನಿಜಲಿಂಗಪ್ಪರವರು ಮೃತ ಪಟ್ಟಿರುವ ಬಗ್ಗೆ ಯಾವುದೇ ವಿವಾದಗಳಿರುವಿರುವುದಿಲ್ಲ. ಆದರೆ ಅಭಿಯೋಜನೆ ಆರೋಪಿ ಬುಲೇರೋ ವಾಹನ ಸಂಖ್ಯೆ ಕೆಎ-06-ಎಬಿ-5721ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಡಿಕ್ಕಿ ಪಡಿಸಿದ ಪರಿಣಾಮ ನಿಜಲಿಂಗಪ್ಪರವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಮೃತ ಪಟ್ಟಿರುತ್ತಾರೆ ಎಂಬ ಅಂಶಗಳನ್ನು ಸಾಬೀತು ಪಡಿಸಬೇಕಾಗುತ್ತದೆ. ಆದರೆ ಈ ಬಗ್ಗೆ ಪ್ರಾ.ಸಾ-1ರವರನ್ನು ದೂರುದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ಆ ಅಪಘಾತದ ಬಗ್ಗೆ ಮಾತ್ರ ತಮ್ಮ ಸಾಕ್ಷ್ಯ ವಿಚಾರಣೆಯಲ್ಲಿ ನುಡಿದಿದ್ದು, ಆದರೆ ಈ ಅಪಘಾತವು ಆರೋಪಿಯ ತಪ್ಪಿನಿಂದಲೇ ಆಗಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಜೊತೆಗೆ ಈ ಸಾಕ್ಷಿ ಈ ಅಪಘಾತದ ಬಗ್ಗೆ ಕೇಳಿ ತಿಳಿದ ಸಾಕ್ಷಿದಾರರಾಗಿದ್ದು ಹಾಗೂ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಈ ಅಪಘಾತವು ಆರೋಪಿ ತಪ್ಪಿನಿಂದಲೇ ಆಗಿದೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-2 ಮತ್ತು 3 ರವರು ಈ ಘಟನೆಗೆ ಸಂಬಂಧಿಸಿದಂತೆ ಪ್ರತ್ಯಕ್ಷ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಇಬ್ಬರೂ ಸಾಕ್ಷಿದಾರರು ಸಹ ಈ ಅಪಘಾತವು ಬುಲೇರೋ ವಾಹನ ಚಾಲಕನ ತಪ್ಪಿನಿಂದ ಆಗಿದ್ದು ಇದರಿಂದ ನಿಜಲಿಂಗಪ್ಪರವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ ಎಂಬುದಾಗಿ ನುಡಿದಿರುತ್ತಾರೆ. ಆದರೆ ಈ ಇಬ್ಬರೂ ಸಾಕ್ಷಿದಾರರು ಸಹ ಆ ಬುಲೇರೋ ವಾಹನ ಚಾಲಕನನ್ನು ತಾವು ನೋಡಿಲ್ಲ ಎಂಬುದಾಗಿ ನುಡಿದಿದ್ದು, ಅಪಘಾತವಾದ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿದ್ದು ಯಾವುದೇ ವಾಹನಗಳು ಅತಿವೇಗವಾಗಿ ಚಲಾಯಿಸಿದ್ದೇ ಆದಲ್ಲಿ ಮುಗುಚಿ ಬೀಳುವ ಸಾಧ್ಯತೆ ಇರುತ್ತದೆ ಎಂಬ ಅಂಶಗಳನ್ನು ಒಪ್ಪಿರುವುದರಿಂದ ಆ ದಿನ ಆರೋಪಿ ಅತಿವೇಗವಾಗಿ ಮತ್ತು ತನ್ನ ಬಾಬ್ತು ಬುಲೇರೋ ಪಿಕಅಪ್ ವಾಹನನ್ನು ಚಲಾಯಿಸಿ ಅಪಘಾತ ಪಡಿಸಿರುತ್ತಾರೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ.

25. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-4ರವರು ನಿಪಿ-16ರಂತಹ ಮೃತನ ಶವ ಪಂಚನಾಮೆಯಲ್ಲಿ ತಮ್ಮ ಸಹಿಗಳನ್ನು ಮಾತ್ರ ಗುರ್ತಿಸಿದ್ದು, ಅದರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆ ಕಾರಣ ಈ ಸಾಕ್ಷಿಯ ಸಾಕ್ಷ್ಯ ಪ್ರಾಸಾ-1 ರಿಂದ 3 ರವರ ಸಾಕ್ಷ್ಯ ಹಾಗೂ ನಿಪಿ-1 ರಂತಹ ದೂರು, ನಿಪಿ-11 ಮತ್ತು 15ರಂತಹ ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಯಲ್ಲಿರುವ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತದೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-5 ಮತ್ತು 6ರವರು ಈ ಅಪಘಾತಕ್ಕೆ ಸಂಬಂದಪಟ್ಟಂತೆ ನಿಪಿ-11 ರಂತಹ ಸ್ಥಳ ಪಂಚನಾಮೆ ಮತ್ತು ನಿಪಿ-15 ರಂತಹ ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು ಮಾತ್ರ ಗುರ್ತಿಸಿದ್ದು, ಅದರಲ್ಲಿ ಬರೆದಿರುವ ವಿಚಾರ ತಮಗೆ ಗೊತ್ತಿಲ್ಲ ಎಂಬುದಾಗಿ ನುಡಿದಿರುವುದರಿಂದ

ಅಭಿಯೋಜನೆಯ ನಿಪಿ-11 ಮತ್ತು 15ರಂತಹ ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಯಲ್ಲಿರುವ ಅಂಶಗಳನ್ನು ಸಾಬೀತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-7ರವರು ಬುಲೇರೋ ಪಿಕಅಪ್ ವಾಹನ ಸಂಖ್ಯೆ ಕೆಎ-06-ಎಬಿ-5721ರ ವಾಹನದ ಮಾಲೀಕರಾಗಿದ್ದು, ಆ ವಾಹನವನ್ನು ತನ್ನ ವಶಕ್ಕೆ ಪಡೆದಕೊಂಡ ಬಗ್ಗೆ ಮಾತ್ರ ನುಡಿದಿರುತ್ತಾರೆ. ಆದರೆ ಈ ಸಾಕ್ಷಿಯು ಈ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವುದರಿಂದ ಈ ಸಾಕ್ಷಿಯ ಸಾಕ್ಷ್ಯದ ಆಧಾರದ ಮೇಲೆ ಆರೋಪಿ ಈ ಮೇಲೆ ಹೇಳಲಾದ ಆರೋಪಗಳನ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿರುವುದಿಲ್ಲ.

26. ಅಭಿಯೋಜನೆ ವಿಚಾರಣೆ ಮಾಡಲಾದ ಪ್ರಾಸಾ-8 ರಿಂದ 11 ರವರು ಈ ಅಪಘಾತಕ್ಕೆ ಸಂಬಂದಪಟ್ಟಂತೆ ತನಿಖಾಧಿಕಾರಿಗಳು ಮತ್ತು ತನಿಖಾ ಸಹಾಯಕರಾಗಿ ವಿಚಾರಣೆ ಮಾಡಿದ್ದು, ಈ ಎಲ್ಲಾ ಸಾಕ್ಷಿದಾರರು ಅಪಘಾತಕ್ಕೆ ಸಂಬಂಧಪಟ್ಟಂತೆ ತನಿಖಾ ಹಂತದಲ್ಲಿ ನಿರ್ವಹಿಸಿದ ತಮ್ಮ ಕರ್ತವ್ಯಗಳ ಬಗ್ಗೆ ನುಡಿದಿರುತ್ತಾರೆ. ಈ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯ ನುಡಿದಿದ್ದರೂ ಸಹ ಇವರ ಸಾಕ್ಷ್ಯಕ್ಕೆ ಪೂರಕವಾಗಿ ಈ ಅಪಘಾತಕ್ಕೆ ಸಂಬಂಧಪಟ್ಟ ದೂರುದಾರರು, ಪ್ರತ್ಯಕ್ಷ ಸಾಕ್ಷಿದಾರರು, ಸ್ಥಳ ಮತ್ತು ಪಂಚನಾಮೆ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯವನ್ನು ನುಡಿಯದೇ ಇರುವುದರಿಂದ ಈ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯು ಮೇಲೆ ಹೇಳಲಾದ ಆರೋಪಗಳನ್ನು ಮಾಡಿದ್ದಾನೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

27. ಪ್ರಕರಣ ವಿಚಾರಣೆಯ ಹಂತದಲ್ಲಿ ಆರೋಪಿ ಪರ ವಕೀಲರು ಮತ್ತು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಮ್ಮತಿ ಮೇರೆಗೆ ನಿಪಿ-22 ರಿಂದ 24 ರಂತಹ ದಾಖಲೆಗಳಾದ ಶವ ಪಂಚನಾಮೆ, ಶವ ಪರೀಕ್ಷಾ ವರದಿ ಮತ್ತು ಐಎಂವಿ ವರದಿಗಳನ್ನು

ನಿಶಾನೆಗೊಳಿಸಿದ್ದು ಆ ಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ಚಾಸಾ-7 ರಿಂದ 12 ರವರನ್ನು ವಿಚಾರಣೆಯಿಂದ ಕೈಬಿಡಲಾಗಿರುತ್ತದೆ. ಅಭಿಯೋಜನೆ ವಿಚಾರಣೆ ಮಾಡಲಾದ ಯಾವುದೇ ಒಬ್ಬ ಸಾಕ್ಷಿದಾರರು ಆದಿನ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಅಪಘಾತವಾಗಿ ನಿಜಲಿಂಗಪ್ಪರವರು ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ ಎಂಬ ಬಗ್ಗೆ ಪೂರಕ ಸಾಕ್ಷ್ಯ ನುಡಿದಿರುವುದಿಲ್ಲ ಮತ್ತು ಅಭಿಯೋಜನೆಯು ಸಹ ಈ ಅಪಘಾತವನ್ನು ಪ್ರತ್ಯಕವಾಗಿ ನೋಡಿದ ಯಾವುದೇ ಒಬ್ಬ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಈ ಕೇಸಿನ ತನಿಖಾಧಿಕಾರಿಗಳು ಆರೋಪಿತನ ವಿರುದ್ಧ ಮಾಡಲಾದ ಭಾರತೀಯ ನ್ಯಾಯ ಸಂಹಿತೆಯ ಕಲಂ 281, 106, ಮೋಟಾರ ವಾಹನ ಕಾಯ್ದೆ ಕಲಂ.134(ಎ ಮತ್ತು ಬಿ), 187 ರಡಿಯಲ್ಲಿ ಹೇಳಲಾದ ಘಟಕಾಂಶಗಳನ್ನು ಪೂರಕವಾದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಾಧಾರಗಳ ಮೂಲಕ ಹಾಗೂ ಸಾಂದರ್ಭಿಕ ಸಾಕ್ಷ್ಯಾಧಾರಗಳ ಮೂಲಕ ನಿಸ್ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ ಎಂದು ಪರಿಗಣಿಸಿ ಆ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಆರೋಪಿತನನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದ್ದೇ ಆದಲ್ಲಿ ನ್ಯಾಯದ ವಿಫಲತೆ ಉಂಟಾಗುವುದಿಲ್ಲ ಎಂದು ಪರಿಗಣಿಸಿ **ಅಂಶ ನಂಃ1 ರಿಂದ 3 ನ್ನು ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

28. **ಅಂಶ ನಂ.4** ಅಂಶ ನಂಃ1 ರಿಂದ 3 ಕ್ಕೆ ಉತ್ತರಿಸಿದ ಕಾರಣಗಳಿಂದ ಈ ಕೆಳಕಂಡಂತೆಃ

**ಆದೇಶ**

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ
ಕಲಂ.271(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು

ಚಲಾಯಿಸುತ್ತಾ ಆರೋಪಿತನನ್ನು ಭಾರತೀಯ ನ್ಯಾಯ ಸಂಹಿತೆ ಕಲಂ. 281, 106, ಮತ್ತು ಮೋಟಾರ ವಾಹನ ಕಾಯ್ದೆ ಕಲಂ.134(ಎ ಮತ್ತು ಬಿ), 187 ರಡಿ ಅಪರಾಧಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತನ ಮತ್ತು ಆತನ ಜಾಮೀನುದಾರನ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ಮೇಲೆ ತಿದ್ದುಪಡಿಗಳನ್ನು ಪರಿಶೀಲಿಸಿ ದಿಃ **21**ನೇ ಜುಲೈ **2026**ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು)

Sd/-
( ಬಿ. ವೆಂಕಟಪ್ಪ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮಧುಗಿರಿ.

## **ಅನುಬಂಧ**

**ಅಭಿಯೋಜನೆ ಪರವಾಗಿ ಸಾಕ್ಷಿ ನುಡಿದವರು.**

ಪ್ರಾ.ಸಾ-1 : ಲಕ್ಷ್ಮಮ್ಮ
ಪ್ರಾ.ಸಾ-2 : ಶ್ರೀರಂಗಪ್ಪ
ಪ್ರಾ.ಸಾ-3 : ಸಿದ್ದಪ್ಪ
ಪ್ರಾ.ಸಾ-4 : ದಾಸಪ್ಪ
ಪ್ರಾ.ಸಾ-5 : ಈರಣ್ಣ

| | |
|---|---|
| ಪ್ರಾಸಾ-6 | : ನಾಗರಾಜು |
| ಪ್ರಾಸಾ-7 | : ಪರಮೇಶ್ |
| ಪ್ರಾಸಾ-8 | : ರವಿ ಟಿ.ಎನ್. |
| ಪ್ರಾಸಾ-9 | : ಲಕ್ಷ್ಮೀನಾರಾಯಣ |
| ಪ್ರಾಸಾ-10 | : ಹೆಚ್.ಜಿ.ಹನುಮಂತರಾಯಪ್ಪ |
| ಪ್ರಾಸಾ-11 | : ಪಿ.ಎಂ.ಅಮ್ಮಣ್ಣಗಿ |

**ಅಭಿಯೋಜನೆ ಪರವಾಗಿ ಹಾಜರುಪಡಿಸಲಾದ ದಾಖಲೆಗಳುಃ**

| | |
|---|---|
| ನಿಪಿ-1 | : ದೂರು |
| ನಿಪಿ-1ಎ | : ಪ್ರಾಸಾ 1 ರವರ ಸಹಿ |
| ನಿಪಿ-1ಬಿ | : ಪ್ರಾಸಾ8 ರವರ ಸಹಿ |
| ನಿಪಿ-2 ರಿಂದ 5 | : ಬುಲೆರೋಗೆ ಸಂಬಂಧಪಟ್ಟ ನಾಲ್ಕು ಪೋಟೋಗಳು |
| ನಿಪಿ-6 ರಿಂದ 9 | : ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟ ನಾಲ್ಕು ಪೋಟೋಗಳು |
| ನಿಪಿ-10 | : ಪ್ರಾಸಾ 2 ರವರ ಹೇಳಿಕೆ |
| ನಿಪಿ-11 | : ಸ್ಥಳ ಪಂಚನಾಮೆ |
| ನಿಪಿ-11ಎ | : ಪ್ರಾಸಾ 3 ರವರ ಸಹಿ |
| ನಿಪಿ-11ಬಿ | : ಪ್ರಾಸಾ 5 ರವರ ಸಹಿ |
| ನಿಪಿ-11ಸಿ | : ಪ್ರಾಸಾ 6 ರವರ ಸಹಿ |
| ನಿಪಿ-11ಡಿ | : ಪ್ರಾಸಾ 9 ರವರ ಸಹಿ |
| ನಿಪಿ-11ಈ | : ಪ್ರಾಸಾ 10 ರವರ ಸಹಿ |
| ನಿಪಿ-12 ರಿಂದ 14 | : ಮೂರು ಪೋಟೋಗಳು |
| ನಿಪಿ-15 | : ಅಮಾನತ್ತು ಪಂಚನಾಮೆ |
| ನಿಪಿ-15ಎ | : ಪ್ರಾಸಾ 3 ರವರ ಸಹಿ |
| ನಿಪಿ-15ಬಿ | : ಪ್ರಾಸಾ 5 ರವರ ಸಹಿ |
| ನಿಪಿ-15ಸಿ | : ಪ್ರಾಸಾ 6 ರವರ ಸಹಿ |

| | |
|---|---|
| ನಿಪಿ-15ಡಿ | : ಪ್ರಾಸಾ 9 ರವರ ಸಹಿ |
| ನಿಪಿ-15ಈ | : ಪ್ರಾಸಾ 10 ರವರ ಸಹಿ |
| ನಿಪಿ-16 | : ಶವ ಪಂಚನಾಮೆ ವರದಿ |
| ನಿಪಿ-16ಎ | : ಪ್ರಾಸಾ 4 ರವರ ಸಹಿ |
| ನಿಪಿ-16ಬಿ | : ಪ್ರಾಸಾ 11 ರವರ ಸಹಿ |
| ನಿಪಿ-17 ಮತ್ತು 18 | : ಎರಡು ಪೋಟೋಗಳು |
| ನಿಪಿ-19 | : ಕಲಂ.133ರ ನೋಟಿಸ್ |
| ನಿಪಿ-19ಎ | : ಪ್ರಾಸಾ 7 ರವರ ಸಹಿ |
| ನಿಪಿ-19ಬಿ | : ಪ್ರಾಸಾ 10 ರವರ ಸಹಿ |
| ನಿಪಿ-20 | : ನೋಟಿಸಿಗೆ ಮರುಉತ್ತರ |
| ನಿಪಿ-20ಎ | : ಪ್ರಾಸಾ 7 ರವರ ಸಹಿ |
| ನಿಪಿ-20ಬಿ | : ಪ್ರಾಸಾ 10 ರವರ ಸಹಿ |
| ನಿಪಿ-21 | : ಇಂಡಿಮಿನಿಟಿ ಬಾಂಡ್ |
| ನಿಪಿ-21ಎ | : ಪ್ರಾಸಾ 7 ರವರ ಸಹಿ |
| ನಿಪಿ-21ಬಿ | : ಪ್ರಾಸಾ 10 ರವರ ಸಹಿ |
| ನಿಪಿ-22 ಮತ್ತು 23 | : ಎರಡು ಐ.ಎಂ.ವಿ. ವರದಿಗಳು |
| ನಿಪಿ-22ಎ, 23ಎ | : ಪ್ರಾಸಾ 10 ರವರ ಸಹಿ |
| ನಿಪಿ-24 | : ಶವ ಪರೀಕ್ಷಾ ವರದಿ |
| ನಿಪಿ-24ಎ | : ಪ್ರಾಸಾ 10 ರವರ ಸಹಿ |
| ನಿಪಿ-25 | : ಪ್ರಥಮ ವರ್ತಮಾನ ವರದಿ |
| ನಿಪಿ-25ಎ | : ಪ್ರಾಸಾ 8 ರವರ ಸಹಿ |
| ನಿಪಿ-26 | : ಒಂದು ಸಿ.ಡಿ. |
| ನಿಪಿ-27 | : ಭಾ.ಸಾ.ಅ.ಕಲಂ.63(4)(ಸಿ)ರಡಿಯಲ್ಲಿ ದೃಡೀಕರಣ ಪತ್ರ |
| ನಿಪಿ-27ಎ | : ಪ್ರಾಸಾ 9 ರವರ ಸಹಿ |
| ನಿಪಿ-27ಬಿ | : ಪ್ರಾಸಾ 10 ರವರ ಸಹಿ |

ನಿಪಿ-28 : ಕೃತ್ಯ ಸ್ಥಳದ ಕಚ್ಚಾನಕ್ಷೆ

ನಿಪಿ-28ಎ : ಪ್ರಾಸಾ 10 ರವರ ಸಹಿ

ನಿಪಿ-29 : ಇಂಡಿಮಿನಿಟಿ ಬಾಂಡ್

ನಿಪಿ-29ಎ : ಪ್ರಾಸಾ 10 ರವರ ಸಹಿ

**ಆರೋಪಿತನ ಪರವಾಗಿ ಸಾಕ್ಷಿ ನುಡಿದವರುಃ**

- ಇಲ್ಲ -

**ಆರೋಪಿತನ ಪರವಾಗಿ ಗುರುತಿಸಿಕೊಂಡ ದಾಖಲೆಗಳುಃ**

- ಇಲ್ಲ -

Sd/-

( ಬಿ. ವೆಂಕಟಪ್ಪ )

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ, ಮಧುಗಿರಿ.